ಕುಮಾರ ಚಲವಾದಿ, ಹೊಳೆನರಸಿಪುರ

*ನಿಜ ಹೇಳಿ; ಶಾಲೆಯಲ್ಲಿದ್ದಾಗ ನಿಮ್ಮ ಗುರುಗಳಿಗೆ ಇದೇ ರೀತಿಯ ಗಲಿಬಿಲಿಗೊಳ್ಳುವ ಉತ್ತರಗಳನ್ನು ನೀಡುತ್ತಿದ್ದಿರಾ?*



ಹೌದು. ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆದುಕೊಂಡು ಬರಲು ಹೇಳುತ್ತಿದ್ದರು. ನನ್ನ ಬ್ರಹ್ಮಲಿಪಿ ಓದಲಾಗದೆ ಗಲಿಬಿಲಿಗೊಳ್ಳುತ್ತಿದ್ದರು.

ಆರಿಫ್, ದಾವಣಗೆರೆ

*ಕಣ್ಣಿಗೆ ಕಾಣದಿರುವ ದೇವರಿಗೆ ಕೈ ಮುಗಿಯುವುದರಲ್ಲಿ ಅರ್ಥವಿದೆಯಾ?*

ಮನಸ್ಸಿನ ಕಣ್ಣಿಗೂ ಕಾಣದಿದ್ದರೆ ನಮಿಸಬೇಡಿ. ನಿಮ್ಮ ಒಂದು ನಮಸ್ಕಾರದಿಂದ ದೇವ ಎಲೆಕ್ಷನ್ ಗೆಲ್ಲಬೇಕಿಲ್ಲ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಟ್ರಾಫಿಕ್ ಜಾಮ್‌ಗೂ, ಬ್ರೆಡ್ ಜಾಮ್‌ಗೂ ಇರುವ ವ್ಯತ್ಯಾಸವೇನು ಶಿವಾ?*

ಟ್ರಾಫಿಕ್ ಜಾಮ್‌ಗೆ ನಾವು ತುತ್ತಾಗುತ್ತೇವೆ, ಬ್ರೆಡ್ ಜಾಮ್ ನಮಗೆ ತುತ್ತಾಗುತ್ತದೆ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಮಾನವನೊರ್ವ ದೇವಮಾನವನಾಗಲು ಏನು ಮಾಡಬೇಕು ಸಾರ್?*



ಕೊಂಚವೇ ಮಂತ್ರ, ಯೋಗಾಸನ, ಒಂದಿಷ್ಟು ಕಣ್ಕಟ್ಟು ವಿದ್ಯೆ, ಕಾವಿ, ಗಡ್ಡ, ಹಣವಿರುವ ಕೆಲವು ಬಕರಾಗಳು, ಇಷ್ಟಿದ್ದರೆ ಸಾಕೇ ಸಾಕು.

ಪಿ.ಜೆ. ರಾಘವೇಂದ್ರ, ಮೈಸೂರು

*ಸಿನೆಮಾದಲ್ಲಿ ನಾಯಕನಂತೆ ನಾಯಕಿ ಏಕೆ ಮೈ ಮುಚ್ಚಿಕೊಳ್ಳುವುದಿಲ್ಲ?*

ಏಕೆಂದರೆ ಪ್ರೇಕ್ಷಕ ಅದನ್ನು ಮೆಚ್ಚಿಕೊಳ್ಳುವುದಿಲ್ಲ!

ಸರಸ್ವತಿ ಮೂರ್ತಿ, ಬೆಂಗಳೂರು

*ಎಲ್ಲದರಲ್ಲೂ ಸಮಾನತೆ ಬೇಕೆನ್ನುವ ಹೆಂಗಸರು ಗಂಡಸರಂತೆ ಫುಲ್ ಡ್ರೆಸ್ ಧರಿಸದೆ ಅರೆಬರೆ ಬಟ್ಟೆ ಧರಿಸುವುದೇಕೆ?*

ಅರ್ಧಾಂಗಿಯರಲ್ಲವೇ... ಗಂಡಸರ ಡ್ರೆಸ್‌ಗಿಂತ ಹೆಚ್ಚೆಂದರೆ ಅರ್ಧದಷ್ಟಿರಬೇಕೆಂಬ ಅಭಿಮತವಂತೆ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ತುಳಿದು ಬಾಳುವವನಿಗೂ, ತಿಳಿದು ಬಾಳುವವನಿಗೂ ಏನು ವ್ಯತ್ಯಾಸ?*

ತುಳಿದು ಬಾಳುವವನು ಟೈಲರ್, ತಿಳಿದು ಬಾಳುವವನು ಟೀಚರ್.

ಎಂ.ಎಸ್. ಮಂಜರ್, ಬಂಡಳ್ಳಿ

*ತಾಯಿಯ ಸೇವೆ ಮಾಡಿದರೆ ಸ್ವರ್ಗ ಸಿಗುತ್ತದೆ. ಹೆಂಡತಿಯ ಸೇವೆ ಮಾಡಿದರೆ?*

ಸ್ವರ್ಗ ಸಿಗದಿದ್ದರೂ ತಾತ್ಕಾಲಿಕವಾಗಿ ನರಕವಂತೂ ತಪ್ಪುತ್ತದೆ.

ಎಚ್.ಆರ್. ದೇಸಾಯಿ, ರಾಯಚೂರು

*ಹೆಂಡತಿ, ಗೆಳೆಯ, ಪುಸ್ತಕ; ಇವುಗಳಲ್ಲಿ ಯಾವ ಬಾಬ್ತನ್ನು ಮೊದಲು ಪ್ರೀತಿಸಿದರೆ ಜೀವನದಲ್ಲಿ ಲಾಭ?*

ಪುಸ್ತಕವನ್ನೇ. ವಿಶೇಷವಾಗಿ ಅಪ್ಪನ ಮತ್ತು ತದನಂತರ ಮಾವನ ಚೆಕ್ ಪುಸ್ತಕವನ್ನು!

ರಾಜೀವ ಎನ್. ಮಾಗಲ್, ಸಕಲೇಶಪುರ

*ಭಾರತದಲ್ಲೇ ಹುಟ್ಟಿ, ಬೆಳೆದು. ಹೊರದೇಶಕ್ಕೆ ಹೋದ ತಕ್ಷಣ ವಿದೇಶಿಯರ ಆಕ್ಸೆಂಟ್‌ನಲ್ಲಿ ಮಾತನಾಡುವುದಕ್ಕೆ ಅಲ್ಲಿನ ನೀರು ಕಾರಣವೆ?*

ಹಾಗೇನಿಲ್ಲ. ಸುತ್ತಲಿನ ಬಣ್ಣಕ್ಕೆ ಹೊಂದಿಕೊಂಡಿದ್ದರೆ ಮಾತ್ರ ಸುರಕ್ಷಿತವೆಂಬ ಭ್ರಮೆ ಹೊಂದುವ ಊಸರವಳ್ಳಿಯ ಗುಣ!

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ

*ನಮ್ಮೂರಲ್ಲಿ ಒಬ್ಬರು ಕೈಯಲ್ಲಿ ಕರ್ಪೂರ ಹಚ್ಚಿದ ಕೂಡಲೆ ಅವರ ಮೈಮೇಲೆ ದೇವರು ಬರುತ್ತಲ್ಲ...?*

ಬಂದ ದೇವನಿಗೆ ಕೋಬಾಲ್, ಸಿ++ ಬಗ್ಗೆ ಪ್ರಶ್ನೆ ಕೇಳಿ; ಮರುಕ್ಷಣವೇ ಅಂತರ್ಧಾನವಾಗುತ್ತಾನೆ! ಮರುಳ ಭಕ್ತನಿಗೊಬ್ಬ ಕಳ್ಳ ದೇವಮಾನವ!

ವೈ.ಎನ್. ಸುಂದರೇಶನ್, ಮೈಸೂರು

*ಫ್ರಾನ್ಸ್ ದೇಶದಲ್ಲಿ ಮನುಷ್ಯರನ್ನು ಕಚ್ಚುವ ಸೊಳ್ಳೆಗಳಿಲ್ಲವಂತೆ, ನಿಜವೆ?*

ಅಲ್ಲಿಯೂ ಇವೆ. ಅವನ್ನು ಇನ್‌ಲ್ಯಾಂಡ್ ರೆವಿನ್ಯೂ ಆಫೀಸರ್ಸ್ ಎಂದು ಕರೆಯುವರಷ್ಟೆ.

## ಬಹುಮಾನಿತ ಪ್ರಶ್ನೆ

ಮಂಜುನಾಥ್ ಎನ್. ಬೆಂಗಳೂರು

*ನುಡಿದರೆ ಲಿಂಗ ಮೆಚ್ಚಿ ಅಹುದಹುದು ಎನ್ನಬೇಕಂತೆ, ಹೌದಾ ರಾಮ್?*

ನಿಜ. ಪುಲ್ಲಿಂಗ ಮೆಚ್ಚಲಿ ಬಿಡಲಿ, ಸ್ತ್ರೀಲಿಂಗ ಮೆಚ್ಚಿ ಅಹುದಹುದು ಎನ್ನುವುದು ಮನೆಯ ಶಾಂತಿಗೆ ಬಹಳ ಮುಖ್ಯ.

ಕುಬೇರಪ್ಪ ಎಂ. ವಿಭೂತಿ, ಹರಿಹರ

*ಕವಿಯ ಮನಸ್ಸಿಗೂ, ಕಪಿಯ ಮನಸ್ಸಿಗೂ ಇರುವ ಅಂತರವೇನು ಗುರುವೆ?*

ಕಪಿಗಳು ಎಂದೂ ಕಪಿಗೋಷ್ಠಿ ನಡೆಸಿ ಬಂದವರ ತಲೆ ಕೆಡಿಸಿದ ದಾಖಲೆ ಇಲ್ಲ!

ಬಿ. ಚಂದ್ರೇಗೌಡ, ಬೆಂಗಳೂರು

*ಮಗುವನ್ನು ದೇವರ ಪ್ರತಿರೂಪ ಅಂತಾರಲ್ಲ...?*

ಮತ್ತೇನು! ಇದ್ದಲ್ಲೇ ಇರತ್ತೆ, ಎಷ್ಟು ಶಂಖ ಹೊಡೆದುಕೊಂಡರೂ ಏನೂ ತಿನ್ನಲ್ಲ, ತಾನೇ ಹೋಗಿ ಸ್ನಾನ ಮಾಡಲ್ಲ, ಆಚೆ ಕರ್ಕೊಂಡ್ಹೋಗ್ಬೇಕಾದ್ರೆ ಭುಜದ ಮೇಲೆ ಹೊರಬೇಕು ಅಥವಾ ವೆಹಿಕಲ್ ಇರ್ಬೇಕು..

ಜಿ.ಎಸ್. ಪ್ರಭಾಕರ್, ಬೆಂಗಳೂರು

*ರಾಜಕಾರಣಿಗಳಿಗೆ ಗಂಡುಮಕ್ಕಳು ಇರುವುದು ಪ್ಲಸ್ಸೋ, ಮೈನಸ್ಸೋ?*



ರಾಜಕಾರಣಿಯ ದೃಷ್ಟಿಯಿಂದ ಪ್ಲಸ್ಸು, ಪ್ರಜಾಪ್ರಭುತ್ವದ ದೃಷ್ಟಿಯಿಂದ ಮೈನಸ್ಸು.

ರಮೇಶ್ ಜೆ. ಬೊಂಗಾಳೆ, ಬೈಲಹೊಂಗಲ

*ಹೆಣ್ಣು+ಹೊನ್ನು+ಮಣ್ಣು = ?*

ಸ್ವಂತದ್ದಾದರೆ ಜೈ; ಕದ್ದದ್ದಾದರೆ ಜೈಲ್!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

*ಮುದುಕರನ್ನು ತದುಕುವುದೇಕೆ?*

ಪಾಪ! ನರಗಳ ದೌರ್ಬಲ್ಯದಿಂದ ಒಂದು ಕಣ್ಣು ಮುಚ್ಚಿ ತೆಗೆದು, ಮುಚ್ಚಿ ತೆಗೆದು ಮಾಡಿದುದನ್ನು ತಪ್ಪು ತಿಳಿದುಕೊಂಡರಂತೆ!

■ ರಾಮ್